ನಿರ್ವಹಿಸಿ, ಕೂಡಲೇ ದುರಸ್ಥಿಗೊಳಿಸಲಾಗುತ್ತಿರುತ್ತದೆ. ಇದರಿಂದ ಯಾವುದೇ ವಾಹನಗಳು ಅನಾವಶ್ಯಕವಾಗಿ ದೀರ್ಘಕಾಲ ದುರಸ್ಥಿಗೆ ಇರುವುದಿಲ್ಲ.

ಈ) ಮತ್ತು ಉ) ಹಾಸನ ವಿಭಾಗಕ್ಕೆ 2015–16ನೇ ಸಾಲಿನಲ್ಲಿ 52 ಹೊಸ ಬಸ್ಸುಗಳನ್ನು ನೀಡಲು ಯೋಜಿಸಲಾಗಿದ್ದು, ಈ ಪೈಕಿ 12 ಬಸ್ಸುಗಳನ್ನು ಚನ್ನರಾಯಪಟ್ಟಣ ಘಟಕಕ್ಕೆ ನೀಡಲು ಯೋಜಿಸಲಾಗಿದೆ.

ಇಲ್ಲಿಯವರೆವಿಗೆ 7 ಹೊಸ ವಾಹನಗಳನ್ನು ಹಾಸನ ವಿಭಾಗಕ್ಕೆ ನೀಡಲಾಗಿದೆ. ಈ 7 ವಾಹನಗಳ ಪೈಕಿ 4 ಹೊಸ ವಾಹನಗಳನ್ನು ಚನ್ನರಾಯಪಟ್ಟಣ ಘಟಕಕ್ಕೆ ನೀಡಲಾಗಿದೆ ಹಾಗೂ ಉಳಿದ 8 ವಾಹನಗಳನ್ನು ಮಾರ್ಚ್–2016ರ ಅಂತ್ಯದೊಳಗಾಗಿ ನೀಡಲು ಯೋಜಿಸಲಾಗುವುದು.

**ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವುದು**

**5079 (5373); ಶ್ರೀ ಬಾಲಕೃಷ್ಣ ಸಿ.ಎನ್. (ಶ್ರವಣಬೆಳಗೊಳ)**

ಅ) ಚನ್ನರಾಯಪಟ್ಟಣ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಈ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಹಾಗೂ ಮೂಲಭೂತ ಸೌಲಭ್ಯಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಆಸ್ಪತ್ರೆಯಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ಚನ್ನರಾಯಪಟ್ಟಣ ಡಯಾಲಿಸಿಸ್ ಕೇಂದ್ರವನ್ನು ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಋ) ಹಾಗಿದ್ದಲ್ಲಿ, ಯಾವಾಗ ಡಯಾಲಿಸಿಸ್ ಕೇಂದ್ರವನ್ನು ತೆರೆಯಲಾಗುವುದು (ವಿವರಗಳನ್ನು ನೀಡುವುದು)

**ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)**

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ ಇರುತ್ತದೆ. ಈ ಆಸ್ಪತ್ರೆಗೆ ಅವಶ್ಯವಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಈ) ಕರ್ನಾಟಕ ಲೋಕಸೇವಾ ಆಯೋಗಕ್ಕೆ 11 ತಜ್ಞತೆಗಳ 983 ತಜ್ಞ ವೈದ್ಯರ, 331 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹಾಗೂ 87 ದಂತ ಆರೋಗ್ಯಾಧಿಕಾರಿಗಳ ನೇಮಕಾತಿಗೆ ಪ್ರಸ್ತಾವನೆಗೆ ಕರ್ನಾಟಕ ಲೋಕಸೇವಾ ಆಯೋಗವು ಅಂತಿಮ ಆಯ್ಕೆ ಪಟ್ಟಿಯನ್ನು ಕಳುಹಿಸಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವೈದ್ಯಾಧಿಕಾರಿ/ ತಜ್ಞರ ವೃಂದದ ಹುದ್ದೆಗಳಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ವೈದ್ಯಾಧಿಕಾರಿ ಮತ್ತು ಇತರೆ ಸಿಬ್ಬಂದಿಯ ವರ್ಗಾವಣೆ ನಿಯಂತ್ರಣ) ನಿಯಮಗಳ ರೀತ್ಯ ಹಾಗೂ ತಜ್ಞರ ವೃಂದದ ಹುದ್ದೆಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕಾತಿ ರೋಸ್ಟರ್ ಅನ್ವಯ ಸಮಾಲೋಚನೆ (ಕೌನ್ಸಿಲಿಂಗ್) ಮುಖಾಂತರ ಸ್ಥಳ ಆಯ್ಕೆ ಮಾಡಿಕೊಳ್ಳಲು ಈ ಕೆಳಕಂಡಂತೆ ಅವಕಾಶ ಕಲ್ಪಿಸಿದೆ.

1) ದಿನಾಂಕ 14–12–2015ರಂದು ಬೆಳಿಗ್ಗೆ 10.00 ಗಂಟೆಗೆ ತಜ್ಞರು (ಚರ್ಮರೋಗ ತಜ್ಞತೆ, ಜನರಲ್ ಮೆಡಿಸನ್ ತಜ್ಞತೆ, ಇಎನ್‌ಟಿ ತಜ್ಞತೆ, ಕೀಲು ಮತ್ತು ಮೂಳೆರೋಗ ತಜ್ಞತೆ, ರೇಡಿಯಾಲಜಿ ತಜ್ಞತೆ, ಜನರಲ್ ಸರ್ಜರಿ, ನೇತ್ರ ತಜ್ಞತೆ, ಸೈಕಿಯಾಟ್ರಿ ತಜ್ಞತೆ).

2) ದಿನಾಂಕ: 15–12–2015ರಂದು ಬೆಳಿಗ್ಗೆ 10:00 ಗಂಟೆಗೆ ದಂತ ಆರೋಗ್ಯಾಧಿಕಾರಿ ಹಾಗೂ ಬೆಳಿಗ್ಗೆ 11:00 ಗಂಟೆಗೆ ತಜ್ಞರು (ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞತೆ, ಮಕ್ಕಳ ತಜ್ಞತೆ ಹಾಗೂ ಅರವಳಿಕೆ ತಜ್ಞತೆ).

3) ದಿನಾಂಕ: 16–12–2015ರಂದು ಬೆಳಿಗ್ಗೆ 10:00 ಗಂಟೆಗೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ.

2580 ಅರೇ ವೈದ್ಯಕೀಯ ಹುದ್ದೆಗಳನ್ನು ನೇಮಕಾತಿ ಮಾಡಲು ಆನ್–ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದ್ದು, ಪ್ರಕ್ರಿಯೆ ಮುಗಿದ ನಂತರ ನೇಮಕಾತಿ ಆದೇಶ ಹೊರಡಿಸಲಾಗುವುದು.

1582 ಗ್ರೂಪ್ "ಡಿ" ಹುದ್ದೆಗಳಿಗೆ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಈಗಾಗಲೇ ಪ್ರಕಟಿಸಿದ್ದು, ಶೀಘ್ರದಲ್ಲಿಯೇ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ತದನಂತರ ನೇಮಕಾತಿ ಆದೇಶ ನೀಡಲಾಗುವುದು.

ಉ) ಇಲ್ಲ

ಊ) ಉದ್ಭವಿಸುವುದಿಲ್ಲ

**ಅನುದಾನ ಬಿಡುಗಡೆ ಹಾಗೂ ಖರ್ಚಿನ ಕುರಿತು**

**5080 (4943); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)**

ಅ) 2015–16ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗಗಳ ಯೋಜನೆಗಳಿಗೆ ನಿಗಧಿಪಡಿಸಲಾದ ಅನುದಾನ ಎಷ್ಟು;

ಆ) 31.10.2015ರವರೆಗೆ ಬಿಡುಗಡೆ ಮಾಡಿದ ಹಾಗೂ ಖರ್ಚು ಮಾಡಿದ ಅನುದಾನ ಎಷ್ಟು?

**ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ಸಚಿವರು)**

ಅ) 2015–16ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ನಿಗಧಿಪಡಿಸಿರುವ **ಅನುದಾನದ ವಿವರವನ್ನು ಅನುಬಂಧ–1 ಮತ್ತು 2** ರಲ್ಲಿ ನೀಡಲಾಗಿದೆ.